## ಅನಿವಾರ್ಯತೆಯಾಗಿದ್ದರೆ ಚೆನ್ನ

'ನಿನ್ನಂಥ ಅಮ್ಮ ಇಲ್ಲ'; (ಮೇ 15, ಸುಮಲತಾ ಎನ್.) ಒಂಟಿ ತಾಯ್ತನದ ಲೇಖನ ಕುತೂಹಲಕಾರಿಯಾಗಿದೆ. 'ಸಂಸಾರ' ಎಂಬ ಸಂಸ್ಥೆಯನ್ನು ಪೂರ್ವಜರು ಹುಟ್ಟುಹಾಕಿದ್ದು, ಸಮಾಜದಲ್ಲಿ ಹೇಗೆ ಬದುಕಬೇಕೆಂಬ ರೀತಿ ರಿವಾಜುಗಳಿಂದ ಕಟ್ಟಿಹಾಕಲ್ಪಟ್ಟಿದೆ. ಈ ಆಧುನಿಕ ಜಗತ್ತಿನಲ್ಲಿ ಸಂಬಂಧಗಳ ಮರುವ್ಯಾಖ್ಯಾನವೂ ಒಂಟಿ ತಾಯ್ತನಕ್ಕೆ (ಸಿಂಗಲ್ ಮದರ್ ಪೇರೆಂಟಿಂಗ್‌ಗೆ) ಪುಷ್ಟಿ ನೀಡಿದೆ. ಇದು ಅನಿವಾರ್ಯವಾಗಿದ್ದರೆ ಮಾತ್ರ ಚೆನ್ನ.

—ಬೆಂ. ಸು. ಬದರೀನಾರಾಯಣ




## ಅಮ್ಮ- ಆಕಾಶ

ಆಕಾಶವನ್ನು ಕುರಿತ ಒಗಟೊಂದಿದೆ. 'ಅಮ್ಮನ ಸೀರೆ ಮಡಿಸೋಕಾಗೊಲ್ಲ...' ಎಂದರೆ, ಅಮ್ಮ ನಕ್ಷತ್ರ ಖಚಿತ ಆಕಾಶ! (ಅಪ್ಪ ಭೂಮಿ?)

—ಸಿಪಿಕೆ, ಮೈಸೂರು

## ತಂದೆಯ ಪ್ರೀತಿಯೂ ಮುಖ್ಯ

'ಸಿಂಗಲ್ ಮದರ್ ಪೇರೆಂಟಿಂಗ್' ಪ್ರಜ್ಞಾಪೂರ್ವಕ ಆಯ್ಕೆ ಎಂದಾಗ ಅನಗತ್ಯ ಎನಿಸದಿರದು. ಆರ್ಥಿಕವಾಗಿ ಸ್ವಾವಲಂಬಿ ಮಹಿಳೆ ಮಗುವಿಗೆ ಉತ್ತಮ ಜೀವನ ಕಟ್ಟಿಕೊಡಬಹುದು. ಆದರೆ ಅಪ್ಪನ ಅಕ್ಕರೆಯ ಬೆಚ್ಚನೆಯ ಭಾವ ಕೊಡಲು ಸಾಧ್ಯವೇ? ಮಗುವಿಗೆ ತಂದೆಯ ಪ್ರೀತಿ ಎಂಬ ಅಮೂಲ್ಯ ಸಿರಿಯನ್ನೇ ತಪ್ಪಿಸುವುದರಲ್ಲಿ ಏನು ಸಾಧನೆ ಇದೆ ಎನಿಸಿತು.

—ಉಷಾ, ಹಾಸನ

## ಸರಿಯಾದ ನಿರ್ಧಾರ

ಗಂಡ ಎಲ್ಲ ಪರಿಸ್ಥಿತಿಯಲ್ಲಿ ಜೊತೆ ನಿಲ್ಲದೆ ಇರುವಾಗ, ಭಿನ್ನಾಭಿಪ್ರಾಯ ಎದುರಾದಾಗ ಖಂಡಿತ ಸರಿಯಾದ ನಿರ್ಧಾರ.

—ದೇವಮ್ಮಣ್ಣಿ ಎಂ.

## ಹೆಮ್ಮೆಯ ಸಂಗತಿ

'ರಿಗ್ರೆಟ್ ಇಲ್ಲ, ಹೆಮ್ಮೆ ಇದೆ' (ಮೇ 15, ಮಂಜುಶ್ರೀ ಎಂ. ಕಡಕೋಳ) ಲೇಖನವು ಮನಸ್ಸಿಗೆ ತುಂಬಾ ಹಿಡಿಸಿತು. ಕವಿತಾ ಲಂಕೇಶ್ ಅವರ ಆಯ್ಕೆ ಹಾಗೂ ಧೈರ್ಯ ಎರಡೂ ಹೆಮ್ಮೆಪಡುವ ವಿಷಯ. ನಿಜಕ್ಕೂ ಸಿಂಗಲ್ ಪೇರೆಂಟಿಂಗ್ ಸುಲಭವಲ್ಲ. ಆದರೆ ಅನಿವಾರ್ಯವಾದಾಗ ಆಯ್ಕೆ ಮಾಡಿಕೊಳ್ಳುವುದರಲ್ಲಿ ಖಂಡಿತ ತಪ್ಪೇನೂ ಇಲ್ಲ.

—ಮಹೇಶ್ವರಿ ಎಂ.

## ಪಾಲಕರಿಗೆ ಮಾರ್ಗದರ್ಶಿ

'ಮಕ್ಕಳ ಒಂಟಿತನ ನೀಗುವುದು ಹೇಗೆ?' (ಮೇ 15, ಸವಿತಾ ಮಾಧವ ಶಾಸ್ತ್ರಿ) 'ಪಾಲನೆ ಪೋಷಣೆ' ಲೇಖನ ಪೋಷಕರಿಗೆ ಮಾರ್ಗದರ್ಶಿಯಂತಿದೆ. ಮಕ್ಕಳ ಬೌದ್ಧಿಕ, ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗುವ ಸಲಹೆಗಳಿವು.

—ಚೇತನಾ ಎಂ., ಮೈಸೂರು

## ಹಿಂಸೆಯ ಆಯಾಮಗಳ ಅನಾವರಣ

'ಹಿತ್ತಲ ಹಿಂಸೆ' (ಮೇ 08, ಚಂಪಕಮಾಲಾ) ಲೇಖನ, ಸಮಾಜದಲ್ಲಿ ಘಟಿಸುತ್ತಿರುವ ಬರ್ಬರ ಹಿಂಸೆ ಮತ್ತು ಕ್ರೌರ್ಯದ ಬಹುರೂಪಿ ಆಯಾಮಗಳನ್ನು ಅನಾವರಣಗೊಳಿಸಿದೆ. ಈ ಕಾಲಕ್ಕೆ ಪ್ರಸ್ತುತವಾಗುವ ಈ ಲೇಖನ, ಮನುಷ್ಯ ತನ್ನವರ ಮೇಲೆಯೇ ನಡೆಸುತ್ತಿರುವ ಹಿಂಸೆಯ ಅನೇಕ ಮುಖಗಳ ಬಗ್ಗೆ ಮನಸ್ಸಿಗೆ ತಟ್ಟುವಂತೆ ವಿಶ್ಲೇಷಿಸಿದೆ. ಜೀವ, ಜೀವನವನ್ನು ಕೊನೆಗೊಳಿಸುವ ವಿದ್ಯಮಾನಗಳಿಗೆ ಸೂಕ್ತ ಪ್ರತಿಬಂಧಕ ವಿವರಿಸಿದ್ದರೆ ಮತ್ತಷ್ಟು ಉಪಯುಕ್ತವಾಗುತ್ತಿತ್ತು.

—ಡಾ. ಮಹಾಬಲರಾಜು ಡಿ.ಕೆ., ದಾವಣಗೆರೆ

## ಅಧಃಪತನದ ಹಾದಿ

'ಹಿತ್ತಲ ಹಿಂಸೆ', ಇಂದಿನ ಮನೋವಿಕಾರಗಳಿಗೆ ಕಾರಣವಾಗುವ ಎಲ್ಲ ವಿದ್ಯಮಾನಗಳನ್ನು ವಿಶ್ಲೇಷಿಸಿದೆ. ಮಾನವೀಯ ಮೌಲ್ಯಗಳನ್ನು ಮರೆತ ನಾವು ಹಿಂತಿರುಗಿ ನೋಡಲಾರದಷ್ಟು ದೂರ ಬಂದಿದ್ದೇವೇನೋ?. ಸಿನಿಮಾ, ಕಿರುತೆರೆ ಮಾಧ್ಯಮಗಳು ನೈತಿಕತೆಯ ದಾರಿ ತಪ್ಪಿಸುವಲ್ಲಿ ಮಹತ್ವದ ಪಾತ್ರವಹಿಸಿವೆ. ಸುದ್ದಿಮಾಧ್ಯಮಗಳು ಕೇವಲ ಕೂಗುಮಾರಿಗಳಾಗಿವೆ. ಹಿಂಸೆ, ಕ್ರೌರ್ಯಗಳು ಸಹಜವೆನ್ನುವಷ್ಟರ ಮಟ್ಟಿಗೆ ಇಂದಿನ ಜನಾಂಗವನ್ನು ಅಣಿಮಾಡುವ ನಿಟ್ಟಿನಲ್ಲಿ ಈ ಎಲ್ಲ ವಿದ್ಯಮಾನಗಳು ನಿರತವಾಗಿವೆಯೆನಿಸುತ್ತದೆ. ಮನುಕುಲ ಅಧಃಪತನದ ಹಾದಿ ಹಿಡಿದಿರುವುದು ನೋವಿನ ಸಂಗತಿ.

—ವೀರಭದ್ರ, ರಟ್ಟಿಹಳ್ಳಿ, ಹುಬ್ಬಳ್ಳಿ

## ಆಲದ ಮರದ ಮೆಲುಕು

'ಆಲದ ಮರವೇ, ಆಲದ ಮರವೇ' (ಮೇ 15, ಬಿ.ಎಂ. ಭಾರತಿ ಹಾದಿಗೆ) ಪ್ರಬಂಧ ಓದುತ್ತಿದ್ದಾಗ ಬಾಲ್ಯದ ನೆನಪುಗಳು ಬಂದವು. ಆಗೆಲ್ಲ ಚಾಮರಾಜನಗರದಿಂದ ಮೈಸೂರಿಗೆ ಪ್ರಯಾಣ ಮಾಡುವಾಗ ರಸ್ತೆಯ ಎರಡೂ ಬದಿಗಳಲ್ಲಿ ಸಮೃದ್ಧವಾಗಿ ಬೆಳೆದಿದ್ದ ಆಲದ ಮರಗಳು ಇಂದು ರಸ್ತೆ ಅಗಲೀಕರಣವಾಗಿ ಒಂದೂ ಉಳಿದಿಲ್ಲ. ನಮ್ಮೂರು ಹೊಸೂರಿನ ಹತ್ತಿರದ ಸತ್ಯಮಂಗಲ ರಸ್ತೆಯ ಆಲದ ಮರಗಳ ಸಮೀಪ ಮರಕೋತಿ ಆಟ ಆಡಿದ ನೆನಪು ಬಂತು.

— ಜಗದೀಶ ಬಿ. ಹೊಸೂರು, ಮೈಸೂರು



## ನಾಗಪ್ಪನ ನೆನಪು



'ಆಫೀಸ್ ರೂಮಿನಲ್ಲಿ ಬುಸ್ ಬುಸ್ ನಾಗಪ್ಪ' (ಮೇ 15, ಎಚ್.ಎಸ್. ನವೀನ್ ಕುಮಾರ್) 'ಮಂದಹಾಸ' ಬರಹ ತುಂಬಾ ಚೆನ್ನಾಗಿದೆ. ಆರು ದಶಕಗಳ ಹಿಂದಿನ ಘಟನೆ. ಹತ್ತು ವರ್ಷದ ತಂಗಿಗೆ ಹುಷಾರಿಲ್ಲದೇ ಮಲಗಿದ್ದಾಗ ಅದೆಲ್ಲಿತ್ತೋ ನಾಗಪ್ಪ ಬುಸ್ಸೆಂದು, ಮಲಗಿದ್ದ ತಂಗಿಯ ತಲೆ ಮೇಲೆ ಹೆಡೆಯಾಡಿಸಿದ್ದು ನೋಡಿ, ಹಿರಿಯಕ್ಕ ರತ್ನಮ್ಮ ಕಂಗಾಲಾದರೂ ತಕ್ಷಣ ಧೈರ್ಯ ವಹಿಸಿ, ಕೈಗೆ ಸಿಕ್ಕ ತೆಂಗಿನ ದೊಡ್ಡ ಪೊರಕೆಯಿಂದ ಹೊಡೆದಾಗ, ತಪ್ಪಿಸಿಕೊಂಡು ಹತ್ತಿರದ ಹೊಲದಲ್ಲಿ ನುಗ್ಗಿತ್ತಂತೆ. ಲೇಖನ ಓದಿ ಈ ಘಟನೆ ನೆನಪಾಯಿತು.

—ಸುಮನಾ

## ಹಾವಿನ ಹಾಸ್ಯ ವೃತ್ತಾಂತ

ಮಲೆನಾಡಿನಲ್ಲಿ ಹಾವುಗಳು ಆಗಾಗ್ಗೆ ಕಾಣಿಸಿಕೊಳ್ಳುವುದು ಸಾಮಾನ್ಯ. ಅನುಭವದ ಮೂಸೆಯಲ್ಲಿ ಮೂಡಿಬಂದ ಹಾವಿನ ವೃತ್ತಾಂತ ಕುತೂಹಲದಿಂದ ಕೂಡಿದ್ದು, ನೈಜ ಚಿತ್ರಣದ ಅಂತ್ಯ ನಗು ಮೂಡಿಸಿತು.

—ಭಾರತೀ ಗಂಗಾಧರ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in